

بسم الله الرّحمٰن الرّحيم

# ಹುನೈನ್ ಯುದ್ಧ: ಹಝ್ರತ್ ಪೈಗಂಬರ್(ಸ)ರ ಧೈರ್ಯ ಮತ್ತು ನಾಯಕತ್ವದ ಒಂದು ಚಿತ್ರಣ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **05–09–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹುನೈನ್ ಯುದ್ಧದಲ್ಲಿ ಶತ್ರುಗಳ ಕಡೆಯಿಂದ ಬಾಣಗಳ ದಾಳಿಯ ಕಾರಣದಿಂದ ಮುಸ್ಲಿಮರ ಸೈನ್ಯದಲ್ಲಿ ಉಂಟಾದ ಗೊಂದಲದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರ ನೂರ್‌ನ 64ನೇ ವಚನವನ್ನು ವ್ಯಾಖ್ಯಾನಿಸುತ್ತಾ ಪ್ರವಾದಿಯ ಆಜ್ಞೆಯನ್ನು ಹೇಗೆ ಪಾಲಿಸಬೇಕು ಎಂಬುದನ್ನು ವಿವರಿಸಿದ್ದಾರೆ. ಆ ವಚನದ ಅನುವಾದ ಹೀಗಿದೆ:

'ಎಲೈ ಸತ್ಯವಿಶ್ವಾಸಿಗಳೇ, ಪ್ರವಾದಿಯ ಕರೆಯನ್ನು ನೀವು ಪರಸ್ಪರ ಕರೆಯುವಂತೆ ಗಣಿಸಬಾರದು. ನಿಮ್ಮ ಪೈಕಿ ಗುಪ್ತವಾಗಿ ತಲೆ ಮರೆಸಿಹೋಗುವವರ ಬಗ್ಗೆ ಅಲ್ಲಾಹನು ಬಲ್ಲನು. ಆದ್ದರಿಂದ ಅವರ (ಪ್ರವಾದಿಯ) ಆಜ್ಞೆಯನ್ನು ಉಲ್ಲಂಘಿಸುವವರು, ತಮಗೆ ಬರುವ ಪರೀಕ್ಷೆಯ ಬಗ್ಗೆ ಅಥವಾ ಯಾತನಾಮಯವಾದ ಶಿಕ್ಷೆಯ ಬಗ್ಗೆ ಎಚ್ಚರವಹಿಸಿಕೊಳ್ಳಲಿ.'

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಾಯಕನ ಕರೆಯ ಮುಂದೆ ಸಾಮಾನ್ಯ ವ್ಯಕ್ತಿಗಳ ಕರೆಗೆ ಯಾವುದೇ ಮಹತ್ವವಿಲ್ಲ. ನಿಮ್ಮ ಕಿವಿಗೆ ಅಲ್ಲಾಹನ ಸಂದೇಶವಾಹಕನ ಕರೆ ಮುಟ್ಟಿದರೆ, ತಕ್ಷಣವೇ ಅದಕ್ಕೆ ಓಗೊಟ್ಟು ಅದನ್ನು ಪಾಲಿಸಲು ಓಡಿಹೋಗುವುದು ನಿಮ್ಮ ಕರ್ತವ್ಯವಾಗಿದೆ. ನಿಮ್ಮ ಪ್ರಗತಿಯ ರಹಸ್ಯ ಇದರಲ್ಲೇ ಅಡಗಿದೆ. ಒಬ್ಬ ವ್ಯಕ್ತಿ ನಮಾಝ್ ನಿರ್ವಹಿಸುತ್ತಿರುವುದಾದರೂ ನಮಾಝನ್ನು ಬಿಟ್ಟು ಅಲ್ಲಾಹನ ಸಂದೇಶವಾಹಕನ ಕರೆಗೆ ಉತ್ತರಿಸುವುದು ಅವನ ಕರ್ತವ್ಯವಾಗಿದೆ. ಒಟ್ಟಿನಲ್ಲಿ, ಪ್ರವಾದಿಯ ಧ್ವನಿಗೆ ತಕ್ಷಣವೇ ಸ್ಪಂದಿಸುವುದು ಒಂದು ಮುಖ್ಯವಾದ ಸಂಗತಿಯಾಗಿದೆ. ಮಾತ್ರವಲ್ಲ, ಸತ್ಯವಿಶ್ವಾಸದ ಚಿಹ್ನೆಗಳಲ್ಲಿ ಒಂದು ಪ್ರಮುಖ ಚಿಹ್ನೆಯಾಗಿದೆ.

ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಮುಸ್ಲಿಮರ ಸೈನ್ಯದಲ್ಲಿ ಉಂಟಾದ ಗೊಂದಲವನ್ನು ಮತ್ತು ಹಝ್ರತ್ ಪೈಗಂಬರ್(ಸ)ರ ಸ್ಥಿರತೆಯನ್ನು ವಿವರಿಸುತ್ತಾ ಹೇಳುತ್ತಾರೆ: ಪರಿಸ್ಥಿತಿ ಹೇಗಿತ್ತೆಂದರೆ, ಹಝ್ರತ್ ಪೈಗಂಬರ್(ಸ)ರ ಸುತ್ತ ಕೇವಲ ಹನ್ನೆರಡು ಸಹಾಬಿಯರು ಮಾತ್ರ ಉಳಿದಿದ್ದರು. ಈ ಸಂದರ್ಭದಲ್ಲಿ ಹಝ್ರತ್ ಅಬ್ಬಾಸ್(ರ) ಹಝ್ರತ್ ಪೈಗಂಬರ್(ಸ)ರ ಕುದುರೆಯ ಕಡಿವಾಣವನ್ನು ಹಿಡಿದು, ಹೀಗೆ ವಿನಂತಿಸಿದರು: 'ಈಗ ಇಲ್ಲಿ ನಿಲ್ಲುವುದರಿಂದ ಯಾವುದೇ ಪ್ರಯೋಜನವಿಲ್ಲ. ಮುಸ್ಲಿಮರನ್ನು ಮತ್ತೆ ಒಗ್ಗೂಡಿಸಿ ಮರಳಿ ಆಕ್ರಮಣ ಮಾಡಲಿಕ್ಕಾಗಿ ಈಗ ಹಿಂದಿರುಗೋಣ.' ಆದರೆ ಹಝ್ರತ್ ಪೈಗಂಬರ್(ಸ) ಹೇಳಿದರು: 'ಅಲ್ಲಾಹನ ಪ್ರವಾದಿ ಯುದ್ಧಭೂಮಿಯಿಂದ ಹಿಮ್ಮೆಟ್ಟಿ ಹೋಗುವುದಿಲ್ಲ.' ಹೀಗೆ ಹೇಳಿ ಅವರು ಕುದುರೆಯ ಕಡಿವಾಣವನ್ನು ಎತ್ತಿ ಅದನ್ನು ಮತ್ತಷ್ಟು ಮುಂದಕ್ಕೆ ನಡೆಸಿದರು ಮತ್ತು ಈ ಪದ್ಯವನ್ನು ಹೇಳಿದರು: **ಅನನ್ನಬಿಯು ಲಾ ಕಧಿಬ್, ಅನ ಇಬ್ನು ಅಬ್ದಿಲ್ ಮುತ್ತಲಿಬ್** – 'ನಾನು ಅಲ್ಲಾಹನ ಪ್ರವಾದಿಯಾಗಿದ್ದೇನೆ, ನಾನು ಸುಳ್ಳುಗಾರನಲ್ಲ. ನಾನು ಅಬ್ದುಲ್ ಮುತ್ತಲಿಬ್‌ನ ಪುತ್ರನಾಗಿದ್ದೇನೆ.' ನಾನು ಇಂದು ನಾಲ್ಕು ಸಾವಿರ ಬಿಲ್ಲುಗಾರರ ದಾಳಿಯ ಹೊರತಾಗಿಯೂ ಹಿಂದೆ ಸರಿಯದೇ ಮುಂದಕ್ಕೆ ಸಾಗುತ್ತಿದ್ದೇನೆ, ಇದನ್ನು ನೋಡಿ ನೀವು ನಾನು ದೇವನು ಅಥವಾ ನನ್ನಲ್ಲಿ ದೈವಿಕ ಗುಣಗಳಿವೆ ಎಂದು ಭಾವಿಸಬೇಡಿ. ಇಲ್ಲ! ನಾನು ದೇವನಲ್ಲ, ನಾನು ಅದೇ ಅಬ್ದುಲ್ ಮುತ್ತಲಿಬ್‌ನ ಪುತ್ರ. ಆದರೆ ಸತ್ಯದಲ್ಲಿ ಪ್ರವಾದಿಗಳು ಅಲ್ಲಾಹನಿಗೆ ಸಮನಾದವರಂತೆ ಇರುತ್ತಾರೆ.

ಈ ಸಂದರ್ಭದಲ್ಲಿ, ಮುಸ್ಲಿಮರನ್ನು ಕೂಗಿ ಮರಳಿ ಕರೆಯಲು ಹಝ್ರತ್ ಪೈಗಂಬರ್(ಸ) ಆದೇಶಿಸಿದರು. ಮುಸ್ಲಿಮರನ್ನು ಕರೆದಾಗ, ಕೆಲವೇ ಕ್ಷಣಗಳಲ್ಲಿ ನಿಷ್ಠಾವಂತ ಸಹಾಬಿಯರು ಅತಿ ವೇಗವಾಗಿ ಯುದ್ಧಭೂಮಿಗೆ ಮರಳಿ ಬಂದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಸಹಾಬಿಯರ ಈ ನಿಷ್ಠೆಯನ್ನು ವಿವರಿಸುತ್ತಾ ಹೇಳುತ್ತಾರೆ: ಇವರು ಹಝ್ರತ್ ಪೈಗಂಬರ್(ಸ) ಹೊಂದಿದ್ದ ಸತ್ಯವಿಶ್ವಾಸದಿಂದ ಪ್ರಯೋಜನ ಪಡೆದವರಾಗಿದ್ದಾರೆ. ಹಝ್ರತ್ ಪೈಗಂಬರ್(ಸ)ರ ಪದವಿ ಎಂತಹದ್ದು ಆಗಿತ್ತು ಎಂದರೆ, ಎಂತಹ ಅಪಾಯವೇ ಇರಲಿ, ಅಲ್ಲಾಹನು ಅವರ ಕಣ್ಣುಗಳಿಂದ ಮರೆಯಾಗುತ್ತಿರಲಿಲ್ಲ. ಇದೇ ಗುಣವು ಸಹಾಬಿಯರಲ್ಲಿ ಅವರವರ ಸ್ಥಾನಕ್ಕೆ ಅನುಗುಣವಾಗಿ ಉಂಟಾಗಿತ್ತು.

ವರದಿಗಳಲ್ಲಿ ಹಝ್ರತ್ ಪೈಗಂಬರ್[ಸ] ಅವರೊಂದಿಗೆ ಸ್ಥಿರವಾಗಿ ನಿಂತ ಸಹಾಬಿಯರು ಮತ್ತು ಸಹಾಬಿಯಾತ್‌ಗಳ ಸಂಖ್ಯೆ ಮತ್ತು ಹೆಸರುಗಳನ್ನು ಕೂಡ ಉಲ್ಲೇಖಿಸಲಾಗಿದೆ. ವಿವಿಧ ವರದಿಗಳಲ್ಲಿ ಈ ಸಂಖ್ಯೆಯನ್ನು ಸುಮಾರು ನೂರರಷ್ಟು ಎಂದು ಹೇಳಲಾಗಿದೆ. ಹಝ್ರತ್ ಉಮ್ಮು ಸುಲೈಮ್[ರ] ಯುದ್ಧಭೂಮಿಯಿಂದ ಜನರು ಓಡಿಹೋದದ್ದನ್ನು ಕಂಡು ಎಷ್ಟು ದುಃಖಿತರಾಗಿದ್ದರೆಂದರೆ, ಅವರು ಹಝ್ರತ್ ಪೈಗಂಬರ್[ಸ]ರೊಡನೆ ಹೀಗೆ ಹೇಳಿದರು: 'ಅಲ್ಲಾಹನ ರಸೂಲರೇ, ನಮ್ಮ ನಂತರ 'ತುಲಲಾಅ್'ರಲ್ಲಿ ಯಾರನ್ನಾದರೂ (ಹಝ್ರತ್ ಪೈಗಂಬರ್[ಸ] ದಯೆ ತೋರಿಸಿ ಕ್ಷಮಿಸಿದ ಮಕ್ಕಾದ ನಿವಾಸಿಗಳಲ್ಲಿ) ಯಾರನ್ನಾದರೂ ಕಾಣುವುದಾದರೆ, ಅವರನ್ನು ಕೊಂದುಬಿಡಿರಿ.' ಹಝ್ರತ್ ಪೈಗಂಬರ್[ಸ] ಹೇಳಿದರು: 'ಹೇ ಉಮ್ಮು ಸುಲೈಮ್, ಖಂಡಿತವಾಗಿಯೂ ಶತ್ರುಗಳ ವಿರುದ್ಧ ಅಲ್ಲಾಹನು ಸಾಕು. ಅವನಾದರೋ ಅವರ ಮೇಲೆ ದಯೆ ತೋರಿದ್ದಾನೆ.'

ಧೀರ ಸಹಾಬಿನಿ ಹಝ್ರತ್ ಉಮ್ಮು ಅಮ್ಮಾರ[ರ] ವರದಿ ಮಾಡುತ್ತಾರೆ: ಹುನೈನ್ ಯುದ್ಧದ ದಿನ ಜನರು ಓಡಿಹೋದಾಗ ನಾವು ನಾಲ್ಕು ಮಹಿಳೆಯರಿದ್ದೆವು. ನನ್ನ ಬಳಿ ಚೂಪಾದ ಖಡ್ಗವಿತ್ತು ಮತ್ತು ಉಮ್ಮು ಸುಲೈಮ್[ರ]ರ ಬಳಿ ಚೂಪಾದ ಚೂರಿಯಿತ್ತು. ಅವರು ಅದನ್ನು ಸೊಂಟಕ್ಕೆ ಕಟ್ಟಿಕೊಂಡಿದ್ದರು ಹಾಗೂ ಅವರು ಗರ್ಭಿಣಿಯಾಗಿದ್ದರು. ಇವರಲ್ಲದೆ ಇನ್ನೂ ಇಬ್ಬರು ಮಹಿಳೆಯರಿದ್ದರು. ಹಝ್ರತ್ ಉಮ್ಮು ಅಮ್ಮಾರ[ರ] ಕೂಗಿ ಹೇಳಿದರು: 'ಎಲೈ ಅನ್ಸಾರರೇ, ನೀವು ಓಡಿಹೋಗಲು ಕಾರಣವೇನು?' ಅವರು ಹೇಳುತ್ತಾರೆ, 'ನಾನು ಹವಾಝಿನ್ ಗೋತ್ರದ ಒಬ್ಬ ವ್ಯಕ್ತಿಯನ್ನು ಕಂಡೆ, ಅವನು ಧ್ವಜವನ್ನು ಹಿಡಿದು ಕಂದು ಬಣ್ಣದ ಒಂಟೆಯ ಮೇಲೆ ಸವಾರನಾಗಿದ್ದನು. ಅವನು ಮುಸ್ಲಿಮರನ್ನು ಬೆನ್ನಟ್ಟುತ್ತಿದ್ದನು. ನಾನು ಅವನ ಎದುರಿಗೆ ಬಂದು ಅವನ ಒಂಟೆಯ ಕಾಲುಗಳ ಮೇಲೆ ಹಲ್ಲೆ ಮಾಡಿದೆ. ಆ ಸವಾರ ಕೆಳಗೆ ಬಿದ್ದಾಗ, ನಾನು ಅವನ ಮೇಲೆ ದಾಳಿ ಮಾಡಿದೆ ಮತ್ತು ಅವನು ಸಾಯುವ ತನಕ ಹಲ್ಲೆ ನಡೆಸುತ್ತಲೇ ಹೋದೆ. ಅನಂತರ ನಾನು ಅವನ ಖಡ್ಗವನ್ನು ತೆಗೆದುಕೊಂಡು ಹಝ್ರತ್ ಪೈಗಂಬರ್[ಸ]ರ ಬಳಿಗೆ ಹೋದೆ. ಆ ವೇಳೆ ಚದುರಿ ಹೋಗಿದ್ದ ಸಹಾಬಿಯರನ್ನು ಹಝ್ರತ್ ಪೈಗಂಬರ್[ಸ] ಮರಳಿ ಕರೆಯುತ್ತಿದ್ದರು ಮತ್ತು ಆ ಸಹಾಬಿಯರು ಹಿಂದಿರುಗಿ ಬರುತ್ತಿದ್ದರು. ಅನಂತರ ಮುಸ್ಲಿಮರು ಶತ್ರುಗಳ ಮೇಲೆ ಪುನಃ ದಾಳಿ ಮಾಡಿದರು. ಈ ದಾಳಿಯನ್ನು ಹೆಚ್ಚು ಸಮಯಕ್ಕೆ ಪ್ರತಿರೋಧಿಸಲು ಶತ್ರುಗಳಿಗೆ ಸಾಧ್ಯವಾಗಲಿಲ್ಲ. ಶತ್ರುಗಳ ಇಂತಹ ಅವಮಾನಕರ ಸೋಲನ್ನು ಎಂದಿಗೂ ನಾನು ನೋಡಿರಲಿಲ್ಲ, ಅವರು ತಲೆಯೆತ್ತಿ ಅತ್ತಿತ್ತ ಓಡುತ್ತಿದ್ದರು. ನನ್ನ ಮಕ್ಕಳು ಕೈದಿಗಳೊಂದಿಗೆ ಮರಳಿ ಬರುತ್ತಿದ್ದರು.

ಸಹಾಬಿಯರು ಹಿಂತಿರುಗಿ ಬಂದು ಯುದ್ಧ ತೀವ್ರಗೊಂಡಾಗ, ಹಝ್ರತ್ ಪೈಗಂಬರ್[ಸ] ತಮ್ಮ ಹೇಸರಗತ್ತೆಯ ಮೇಲೆ ಸವಾರರಾಗಿ ಯುದ್ಧದ ದೃಶ್ಯವನ್ನು ನೋಡಿದರು. 'ಯುದ್ಧವು ತೀವ್ರಗತಿಯಲ್ಲಿ ನಡೆಯುತ್ತಿದೆ' ಎಂದು ಹಝ್ರತ್ ಪೈಗಂಬರ್[ಸ] ಹೇಳಿದರು. ಅನಂತರ ಅವರು ಕೆಲವು ಕಲ್ಲುಗಳನ್ನು ತೆಗೆದು ಸತ್ಯನಿಷೇಧಿಗಳ ಕಡೆಗೆ ಎಸೆಯುತ್ತಾ ಹೀಗೆ ಹೇಳಿದರು: 'ಮುಹಮ್ಮದ್‌ನ[ಸ] ಪ್ರಭುವಿನಾಣೆ, ಈ ಜನರು ಸೋತುಹೋದರು' ಹಝ್ರತ್ ಅಬ್ಬಾಸ್[ರ] ಹೇಳುತ್ತಾರೆ: 'ಯುದ್ಧವು ಆರಂಭದಲ್ಲಿ ನಡೆಯುತ್ತಿದ್ದ ರೀತಿಯಲ್ಲೇ ಪುನಃ ಪ್ರಾರಂಭವಾಗಿತ್ತು. ಅಲ್ಲಾಹನಾಣೆ! ಹಝ್ರತ್ ಪೈಗಂಬರ್[ಸ] ಕಲ್ಲುಗಳನ್ನು ಎಸೆದ ತಕ್ಷಣ, ಸತ್ಯನಿಷೇಧಿಗಳ ವೇಗ ಕಡಿಮೆಯಾಗಲು ತೊಡಗಿತು ಮತ್ತು ಪರಿಸ್ಥಿತಿ ತಲೆಕೆಳಗಾಯಿತು.' ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್[ಸ]ರ ಒಂದು ಪ್ರಾರ್ಥನೆಯ ಉಲ್ಲೇಖವೂ ಇದೆ. ಅದು ಹೀಗೆ: 'ಹೇ ಅಲ್ಲಾಹ್, ನೀನು ನನಗೆ ಮಾಡಿದ ವಾಗ್ದಾನದ ಹೆಸರಿನಲ್ಲಿ ನಾನು ನಿನ್ನಲ್ಲಿ ಕೇಳುತ್ತೇನೆ. ಹೇ ಅಲ್ಲಾಹ್, ಅವರು ನಮ್ಮ ಮೇಲೆ ಮೇಲುಗೈ ಸಾಧಿಸುವುದು ಮತ್ತು ನಾವು ಸೋಲುವುದು ಸೂಕ್ತವಲ್ಲ.'

ಶೈಬ ಬಿನ್ ಉಸ್ಮಾನ್ ಒಬ್ಬ ಗೌರವಾನ್ವಿತ ಖುರೈಶಿ ವ್ಯಕ್ತಿಯಾಗಿದ್ದನು, ಆತನ ತಂದೆ ಉಹುದ್ ಯುದ್ಧದಲ್ಲಿ ಕೊಲ್ಲಲ್ಪಟ್ಟಿದ್ದನು. ಅವರು ಸ್ವತಃ ಹೀಗೆ ಹೇಳುತ್ತಿದ್ದರು: 'ಇಡೀ ಅರಬ್ ದೇಶವಾಸಿಗಳು ಮುಸ್ಲಿಮರಾದರೂ ನಾನು ಮುಸ್ಲಿಮನಾಗಲಾರೆನು." ಅವರು ಹೇಳುತ್ತಾರೆ: 'ಯುದ್ಧಭೂಮಿಯಲ್ಲಿ ಹಝ್ರತ್ ಪೈಗಂಬರ್[ಸ]ರ ಸುತ್ತ ಕೇವಲ ಕೆಲವು ಜನರು ಮಾತ್ರ ಉಳಿದಿದ್ದಾಗ, ಹಝ್ರತ್ ಪೈಗಂಬರ್[ಸ]ರನ್ನು ವಧಿಸಲು ಇದು ಉತ್ತಮ ಅವಕಾಶ ಎಂದು ನಾನು ಯೋಚಿಸಿದೆ. ಹೀಗೆ ಯೋಚಿಸಿ ನಾನು ಬಲಭಾಗದಿಂದ ದಾಳಿ ಮಾಡಲು ಪ್ರಯತ್ನಿಸಿದಾಗ ನಾನು ಅಲ್ಲಿ ಅಬ್ಬಾಸ್ ನಿಂತಿರುವುದನ್ನು ಕಂಡೆನು. ಅಬ್ಬಾಸ್ ಇರುವಾಗ ಹಝ್ರತ್ ಪೈಗಂಬರ್[ಸ]ರ ಮೇಲೆ ದಾಳಿ ಮಾಡಲು ಸಾಧ್ಯವಲ್ಲ ಎಂದು ನಾನು ಯೋಚಿಸಿದೆ. ಅನಂತರ ನಾನು ಎಡಭಾಗದಿಂದ ದಾಳಿ ಮಾಡಲು ಪ್ರಯತ್ನಿಸಿದಾಗ ಅಲ್ಲಿ ನಾನು ಅಬೂ ಸುಫ್‌ಯಾನ್ ಬಿನ್ ಹಾರಿಸ್ ನಿಂತಿದ್ದನ್ನು ಕಂಡೆನು. ಆದ್ದರಿಂದ ನಾನು ಹಿಂದಿರುಗಿದೆ. ಅನಂತರ ನಾನು ಹಝ್ರತ್ ಪೈಗಂಬರ್[ಸ]ರ ಹಿಂದಿನಿಂದ ದಾಳಿ ಮಾಡಲು ಬಯಸಿದೆ. ಆದರೆ ನಾನು ಭಯಗೊಂಡು ನನ್ನ ಕಣ್ಣುಗಳ ಮೇಲೆ ಕೈ ಇಟ್ಟು ಓಡಿಹೋದೆ. ನಂತರದ ಕಾಲದಲ್ಲಿ ಅವರು ಹೇಳುತ್ತಾರೆ – ಆಗ ನಾನು ಬೆಂಕಿಯ ಜ್ವಾಲೆಗಳು ಏರುತ್ತಿರುವುದನ್ನು ಕಂಡೆನು. ಅದು ನನ್ನನ್ನು ಸುಟ್ಟುಹಾಕುವಂತಿದ್ದವು. ಆಗ ಹಝ್ರತ್ ಪೈಗಂಬರ್[ಸ] ನನ್ನನ್ನು ಹೀಗೆ ಕರೆದರು: 'ಎಲೈ ಶೈಬ, ನನ್ನ ಹತ್ತಿರ ಬಾ'. ನಾನು ಅವರ ಸಮೀಪಕ್ಕೆ ಹೋದಾಗ ಅವರು ಮುಗುಳ್ನಕ್ಕು ನನ್ನ ಎದೆಯ ಮೇಲೆ ಕೈಯನ್ನು ಇಟ್ಟು ಹೀಗೆ ದುಆ ಮಾಡಿದರು: 'ಹೇ ಅಲ್ಲಾಹ್, ಶೈತಾನನನ್ನು ಇವನಿಂದ ದೂರ ಸರಿಸು'. ಶೈಬ ಹೇಳುತ್ತಾರೆ: 'ದೇವನಾಣೆ! ಆ ಕ್ಷಣದಿಂದಲೇ ಅಲ್ಲಾಹನ ರಸೂಲ್ ನನ್ನ ಕಿವಿಗಳಿಗಿಂತ, ನನ್ನ ಕಣ್ಣುಗಳಿಗಿಂತ ಮತ್ತು ನನ್ನ ಪ್ರಾಣಕ್ಕಿಂತಲೂ ಹೆಚ್ಚು ಪ್ರಿಯರಾದರು ಹಾಗೂ ನನ್ನ ಹೃದಯ ಶುದ್ಧವಾಯಿತು.' ಅನಂತರ ಹಝ್ರತ್ ಪೈಗಂಬರ್[ಸ] ಶೈಬರೊಡನೆ ಹೀಗೆ ಹೇಳಿದರು: 'ಎಲೈ ಶೈಬ, ಸತ್ಯನಿಷೇಧಿಗಳ ವಿರುದ್ಧ ಯುದ್ಧ ಮಾಡು.' ಶೈಬ ಹೇಳುತ್ತಾರೆ: 'ಈಗ ನಾನು ಹಝ್ರತ್ ಪೈಗಂಬರ್[ಸ]ರ ರಕ್ಷಣೆಗಾಗಿ ಖಡ್ಗವನ್ನು ಎತ್ತಿ ಮುಂದಕ್ಕೆ ಸಾಗಿದೆ ಮತ್ತು ಹಝ್ರತ್ ಪೈಗಂಬರ್[ಸ]ರ ಪ್ರೀತಿಯಲ್ಲಿ ನಾನು ಹೇಗೆ ಹೋರಾಡಲು ತೊಡಗಿದನು ಎಂದರೆ, ಆ ಸಮಯದಲ್ಲಿ ನನ್ನ ತಂದೆ ನನ್ನ ಮುಂದೆ ಬಂದರೆ ಕೂಡ ನಾನು ಅವರನ್ನೂ ಕೊಂದುಬಿಡುತ್ತಿದ್ದೆ.'

ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಕೂಡ ವಿವರಿಸಿದ್ದಾರೆ. ಅವರು ಈ ಘಟನೆಯನ್ನು ವಿವರಿಸಿದ ನಂತರ ಹೇಳುತ್ತಾರೆ: 'ಇದಾಗಿತ್ತು ಆ ಪ್ರೀತಿ. ಅದು ಅವನ ಹಗೆಯನ್ನು ದೂರ ಮಾಡಿತು' ಯುದ್ಧದ ನಂತರ ಹಝ್ರತ್ ಪೈಗಂಬರ್(ಸ) ತಮ್ಮ ಡೇರೆಯೊಳಗೆ ಕುಳಿತಿದ್ದಾಗ, ಶೈಬ ಬಿನ್ ಉಸ್ಮಾನ್(ರ) ಹಝ್ರತ್ ಪೈಗಂಬರ್(ಸ)ರನ್ನು ಭೇಟಿ ಮಾಡಲು ಬಂದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಈಗ ಅಲ್ಲಾಹನು ನಿನಗಾಗಿ ಏನು ನಿರ್ಧರಿಸಿದ್ದಾನೋ ಅದು ನೀನು ಆ ರಣರಂಗದಲ್ಲಿ ಯೋಚಿಸುತ್ತಿದ್ದಕ್ಕಿಂತ ಉತ್ತಮವಾಗಿದೆ' ಅನಂತರ ಯುದ್ಧಭೂಮಿಯಲ್ಲಿ ಶೈಬ ತನ್ನ ಮನಸಿನಲ್ಲಿ ಯೋಚಿಸುತ್ತಿದ್ದ ಎಲ್ಲ ಸಂಗತಿಗಳನ್ನು ಹಝ್ರತ್ ಪೈಗಂಬರ್(ಸ) ಹೇಳಿದರು. ಶೈಬ ತನ್ನ ಪಾಪಗಳಿಗಾಗಿ ಕ್ಷಮೆ ಯಾಚಿಸಲಿಕ್ಕಾಗಿ ದುಆ ಮಾಡುವಂತೆ ವಿನಂತಿಸಿದಾಗ, 'ಅಲ್ಲಾಹನು ನಿನ್ನನ್ನು ಕ್ಷಮಿಸಲಿ' ಎಂದು ಹಝ್ರತ್ ಪೈಗಂಬರ್(ಸ) ದುಆ ಮಾಡಿದರು.

ಅದೇ ರೀತಿ, ನಝೀರ್ ಬಿನ್ ಹಾರಿಸ್ ತನ್ನ ಹೃದಯದಲ್ಲಿ ಮೊದಲು ಹೊಂದಿದ್ದ ದುರುದ್ದೇಶ ಮತ್ತು ಅನಂತರ ಅವರ ಉತ್ತಮ ಅಂತ್ಯದ ಬಗ್ಗೆಯೂ ಉಲ್ಲೇಖವಿದೆ. 'ನಮ್ಮ ಪೂರ್ವಜರು ಇದ್ದಂತಹ ಆ ಶಿರ್ಕಿನಲ್ಲಿ ನಾವು ಸಾಯಲಿಲ್ಲ' ಎಂದು ಹುನೈನ್ ಸೈನ್ಯದಲ್ಲಿ ದುರುದ್ದೇಶದಿಂದ ಸೇರಿಕೊಂಡಿದ್ದ ಮಕ್ಕಾದ ಜನರಲ್ಲಿ ಹೆಚ್ಚಿನವರು ಅನಂತರ ಹೇಳುತ್ತಿದ್ದರು. ಅವರ ಇಸ್ಲಾಮಿಕ ಜೀವನ ಬಹಳ ಉತ್ತಮವಾಗಿತ್ತು. ಅವರು ಹಿಜ್ರತ್ ಮಾಡಿ ಮದೀನಾಕ್ಕೆ ಹೋದರು. ಅನಂತರ ಅಲ್ಲಿಂದ ಯುದ್ಧ ಮಾಡಲಿಕ್ಕಾಗಿ ಸಿರಿಯಾಕ್ಕೆ ಹೋದರು. ಅವರು ಹದಿನೈದನೇ ಹಿಜರಿಯಲ್ಲಿ ಯರ್ಮೂಕ್ ಯುದ್ಧದಲ್ಲಿ ಹುತಾತ್ಮರಾದರು. ಉಳಿದ ಭಾಗವನ್ನು ಮುಂದಿನ ಬಾರಿ ವಿವರಿಸಲಾಗುವುದು. ಇನ್‌ಶಾ ಅಲ್ಲಾಹ್.

————————————*****————————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak',*** *Islamabad, Tilford,* U.K. On 05-09-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email****:* *khutuba.kannada@gmail.com*

**You can find all the Sermons archived at**: www.alislam.org/friday-sermon